ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	629 (739)
ಸದಸ್ಯರ ಹೆಸರು	:	ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	17.09.2021
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ 2018 ರಿಂದ 2021ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಯೋಜನೆಯಡಿ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು;	ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯಡಿ ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ 2018 ರಿಂದ 2021ನೇ ಸಾಲಿನಲ್ಲಿನವರೆಗೆ ಬಿಡುಗಡೆಯಾದ ಅನುದಾನದ ವಿವರವನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ. (ರೂ.ಲಕ್ಷಗಳಲ್ಲಿ)

ವರ್ಷ	ಬಿಡುಗಡೆಯಾದ ಅನುದಾನ		
	ಧಾರವಾಡ	ಗದಗ	ಹಾವೇರಿ
2018-19	31.20	909.24	921.89
2019-20	3604.49	901.69	2344.03
2020-21	1485.78	1040.85	1630.68

ಕ್ರ.ಸಂ	ಪ್ರಶ್ನೆ	ಉತ್ತರ
(ಆ)	ಸದರಿ ಜಿಲ್ಲೆಗಳಲ್ಲಿ ಈ ರೀತಿ ಬಿಡುಗಡೆಯಾದ ಅನುದಾನದಲ್ಲಿ ಶೇಕಡಾ ಎಷ್ಟು ಪ್ರಮಾಣದಲ್ಲಿ ವ್ಯಯ ಮಾಡಲಾಗಿರುತ್ತದೆ;	ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳಲ್ಲಿ 2018 ರಿಂದ 2021ನೇ ಸಾಲಿನಲ್ಲಿನವರೆಗೆ ಬಿಡುಗಡೆಯಾದ ಹಾಗೂ ವಿವಿಧ ಘಟಕಾಂಶಗಳ ಅನುಷ್ಠಾನಕ್ಕೆ ವೆಚ್ಚ ಮಾಡಲಾದ ಅನುದಾನದ ವಿವರವನ್ನು ಈ ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.

ವರ್ಷ	ಧಾರವಾಡ		ಗದಗ		ಹಾವೇರಿ	
	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ	ಬಿಡುಗಡೆ	ವೆಚ್ಚ
2018-19	31.20	386.37	909.24	820.54	921.89	859.38
2019-20	3604.49	2681.18	901.69	775.31	2344.03	1563.74
2020-21	1485.78	1163.76	1040.85	576.61	1630.68	909.31

ಧಾರವಾಡ ಜಿಲ್ಲೆಯಲ್ಲಿ 2018-19ನೇ ಸಾಲಿನಲ್ಲಿ ಬಿಡುಗಡೆಯಾಗಿರುವ ಅನುದಾನದ ಜೊತೆಗೆ ಲಭ್ಯವಿದ್ದ ಆರಂಭಿಕ ಶಿಲ್ಕು ಸೇರಿ ವೆಚ್ಚ ಮಾಡಲಾಗಿರುತ್ತದೆ.

ಕ್ರ.ಸಂ	ಪ್ರಶ್ನೆ	ಉತ್ತರ
(ಇ)	ನಿಧೀಷ್ಟ ಕಾಲಾವಧಿಯೊಳಗೆ ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ವ್ಯಯ ಮಾಡಲು ವಿಫಲರಾದ ಅಧಿಕಾರಿಗಳ ವಿರುದ್ಧ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ? (ವಿವರಿಸುವುದು)	ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯ ಮುಂದುವರೆದ ಭಾಗವಾಗಿ ಕೇಂದ್ರ ಸರ್ಕಾರವು SBM (G) Phase-II 2020-21ನೇ ರಿಂದ 2024-25ರ ಅವಧಿಯಲ್ಲಿ ಅನುಷ್ಠಾನ ಮಾಡಲು ಮಾರ್ಗಸೂಚಿಯನ್ನು ಜಾರಿಗೆ ತಂದಿದ್ದು, ಅದರಂತೆ, ರಾಜ್ಯದ ಪ್ರತಿ ಗ್ರಾಮ/ಗ್ರಾಮ ಪಂಚಾಯಿತಿಯನ್ನು 2024-25ರೊಳಗೆ ODF Plus ಮಾಡುವುದು ಈ ಯೋಜನೆಯ ಗುರಿಯಾಗಿದ್ದು, ಕೆಳಕಂಡ ಘಟಕಾಂಶಗಳನ್ನು ಯೋಜನೆಯಡಿ ಅನುಷ್ಠಾನ ಮಾಡಲಾಗುತ್ತಿದೆ. **SBM-G Pahse-II ಮಾರ್ಗಸೂಚಿಯ ಪ್ರಮುಖ ಘಟಕಾಂಶಗಳು:** 1. ಹೊಸ ಶೌಚಾಲಯರಹಿತ ಮನೆಗಳಿಗೆ ವೈಯಕ್ತಿಕ ಗೃಹ ಶೌಚಾಲಯಗಳ ನಿರ್ಮಾಣ. 2. ಸಮುದಾಯ/ಸಾರ್ವಜನಿಕ ಶೌಚಾಲಯಗಳು 3. ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ 4. ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕ (PWMU/MRF). (ಜಿಲ್ಲೆ/ತಾಲ್ಲೂಕು ಮಟ್ಟದಲ್ಲಿ)

		5. ಮಲ ತ್ಯಾಜ್ಯ ನಿರ್ವಹಣೆ (FSM) (ಜಿಲ್ಲೆ/ತಾಲ್ಲೂಕು ಮಟ್ಟದಲ್ಲಿ) 6. **GOBAR Dhan** ಯೋಜನೆ ವೈಯಕ್ತಿಕ ಗೃಹ ಶೌಚಾಲಯಗಳ ಗುರಿಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಪ್ರಗತಿ ಸಾಧಿಸಲಾಗಿದ್ದು, ಪ್ರಸ್ತುತ ಘನ ತ್ಯಾಜ್ಯ ನಿರ್ವಹಣೆ, ದ್ರವತ್ಯಾಜ್ಯ ನಿರ್ವಹಣೆ, ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ಘಟಕ ಹಾಗೂ ಮಲ ತ್ಯಾಜ್ಯ ನಿರ್ವಹಣೆ (FSM) ಘಟಕಗಳ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಲಾಗಿದ್ದು, ಈಗಾಗಲೇ ವಿಸ್ತೃತಾ ಯೋಜನಾ ವರದಿಗಳ ಸಿದ್ಧಪಡಿಸುವುದು, ಅನುಷ್ಠಾನದ ವಿವಿಧ ಹಂತಗಳಿಗೆ ಚಾಲನೆ ನೀಡುವುದು ಹೀಗೆ ವಿವಿಧ ಪ್ರಕ್ರಿಯೆಗಳು ಚಾಲ್ತಿಯಲ್ಲಿವೆ ಹಾಗೂ ನಿರ್ಮಾಣ ಕಾಮಗಾರಿಗಳು ಪ್ರಗತಿಯ ವಿವಿಧ ಹಂತದಲ್ಲಿವೆ. ಸದರಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಕಾರ್ಯಾಚರಣೆಗೊಳಿಸಲು ಕಾಲಾವಕಾಶ ಅಗತ್ಯವಿರುತ್ತದೆ. ಆದರೂ ಸಹ ಸದರಿ ಘಟಕಾಂಶಗಳ ಅನುಷ್ಠಾನಕ್ಕೆ ಕಾಲಾವಕಾಶ ನಿಗದಿಪಡಿಸಲಾಗಿದ್ದು, ಶೀಘ್ರದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ, ಬಿಡುಗಡೆಗೊಳಿಸಿರುವ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಮಾಡಲು ಕ್ರಮವಹಿಸಲಾಗುತ್ತಿದೆ.

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು